

ಆರ್‌ಸಿಬಿಯ ಸರ್ಫರಾಜ್ ಖಾನ್

ಹೆಜ್ಜೆಗುರುತು ಮೂಡಿಸುವ ಅವಕಾಶ ಸಿಕ್ಕಿರುವುದು ಕೂಡ ಮಹತ್ವದ್ದು. ಆ ದೇಶದಲ್ಲಿರುವ ಅತ್ಯಲ್ಪ ಪ್ರಮಾಣದ ಸೌಲಭ್ಯಗಳನ್ನು ಬಳಸಿಕೊಂಡು ಬೆಳೆಯುತ್ತಿರುವ ರಶೀದ್ ಅವರಂತಹ ಮತ್ತಷ್ಟು ಪ್ರತಿಭೆಗಳಿಗೆ ಉತ್ತೇಜನವೂ ಹೌದು. ಟೂರ್ನಿಯ ಮೊದಲ ಪಂದ್ಯದಲ್ಲಿಯೇ ಪದಾರ್ಪಣೆ ಮಾಡುವ ಅವಕಾಶ ಪಡೆದ ರಶೀದ್ ಅದನ್ನು ಸಮರ್ಥವಾಗಿಯೇ ಬಳಸಿಕೊಂಡಿದ್ದಾರೆ. ಸನ್‌ರೈಸರ್ಸ್‌ನ ಅಮೋಘ ಜಯದಲ್ಲಿ ತಮ್ಮ ಕಾಣಿಕೆಯನ್ನೂ ನೀಡಿದ್ದಾರೆ.

### ಕಷ್ಟದ ಹಾದಿಯಲ್ಲಿ ಬೆಳೆದ ಪಂತ್

ದೆಹಲಿಯ ಎಡಗೈ ಬ್ಯಾಟ್ಸ್‌ಮನ್ ರಿಷಭ್ ಪಂತ್, ಕ್ರಿಕೆಟ್ ಆಟಗಾರನಾಗಲು ಹಲವು ಕಷ್ಟನಷ್ಟಗಳನ್ನು ಎದುರಿಸಿದವರು. 2016ರ ಐಪಿಎಲ್‌ನಲ್ಲಿ ₹1.9 ಕೋಟಿಗೆ ಡೆಲ್ಲಿ ಡೇರ್‌ಡೆವಿಲ್ಸ್ ತಂಡವು ಅವರನ್ನು ಖರೀದಿಸಿತ್ತು. 2015ರಲ್ಲಿ ಅವರು ಜೂನಿಯರ್ ನ್ಯಾಷನಲ್ ಲೀಗ್‌ನಲ್ಲಿ ಬಾರಿಸಿದ್ದ ಮಿಂಚಿನವೇಗದ ಶತಕ ಮತ್ತು ಅರ್ಧಶತಕಗಳು ಅವರಿಗೆ ಈ ಬೆಲೆ ತಂದುಕೊಟ್ಟಿದ್ದವು.

ಆದರೆ, ಉತ್ತರಾಖಂಡದ ರೂರ್ಕಿಯ ರಿಷಭ್ ಈ ಹಂತಕ್ಕೆ ಏರಲು ಹಲವು ಅಡೆತಡೆಗಳನ್ನು ದಾಟಿದ್ದರು. ಡೆಹ್ರಾಡೂನ್, ರೂರ್ಕೆಲಾ, ದೆಹಲಿ ಸೇರಿದಂತೆ ಹಲವು ನಗರಗಳ ಅಕಾಡೆಮಿ, ತರಬೇತಿ ಕೇಂದ್ರಗಳ ಕದ ತಟ್ಟಿದ್ದರು. ಆದರೆ, 14ನೇ ವಯಸ್ಸಿನವರೆಗೂ ಅವರಿಗೆ ಸೂಕ್ತ ಅವಕಾಶ ಸಿಗಲೇ ಇಲ್ಲ. ದೆಹಲಿ ಸಿನ್ಹಾ ಅವರ ಅಕಾಡೆಮಿ ಸೇರಿದ ಮೇಲೆ ಅವರ ಭಾಗ್ಯದ ಬಾಗಿಲು ತೆರೆಯಿತು. ಜಿಲ್ಲೆ, ವಲಯಮಟ್ಟಗಳಲ್ಲಿ ಅವರ ಅಸಾಧಾರಣ ಆಟಕ್ಕೆ ರಾಜ್ಯ ಮತ್ತು ರಾಷ್ಟ್ರೀಯ ತಂಡಗಳು ಕೈಬೀಸಿ ಕರೆದವು.

**16** ಪ್ರತಿ ತಂಡದಲ್ಲಿ ಇರಬೇಕಾದ ಆಟಗಾರರ ಒಟ್ಟು ಸಂಖ್ಯೆ

**10** ಒಂದು ಪೂರ್ಣ ತಂಡದಲ್ಲಿ ಇರಬಹುದಾದ ವಿದೇಶಿ ಆಟಗಾರರ ಸಂಖ್ಯೆ

19 ವರ್ಷದೊಳಗಿನವರ ಕೋಚ್ ರಾಹುಲ್ ದ್ರಾವಿಡ್ ಅವರ ಮಾರ್ಗದರ್ಶನ ಈ ಹುಡುಗನ ಪ್ರತಿಭೆಯನ್ನು ಉತ್ತುಂಗಕ್ಕೇರಿಸಿತು. ದ್ರಾವಿಡ್ ಅವರೇ ಮಾರ್ಗದರ್ಶಕರಾಗಿರುವ ಡೇರ್ ಡೆವಿಲ್ಸ್‌ನಲ್ಲಿಯೂ ರಿಷಭ್ ಆಡಿದರು. ಗುಜರಾತ್ ಲಯನ್ಸ್ ವಿರುದ್ಧದ ಪಂದ್ಯದಲ್ಲಿ 40 ಎಸೆತಗಳಲ್ಲಿ 69 ಗಳಿಸಿದ ಅವರ ಮಿಂಚಿನ ಬ್ಯಾಟಿಂಗ್ ಕಣ್ಣು ಕೋರೈಸುವಂತಿತ್ತು. ಹೋದ ಋತುವಿನ ರಣಜಿ ಟೂರ್ನಿಯಲ್ಲಿಯೂ ಅವರ ತ್ರಿಶತಕವು ಆಯ್ಕೆ ಸಮಿತಿಯ ಗಮನ ಸೆಳೆದಿತ್ತು. ರಾಷ್ಟ್ರೀಯ ತಂಡಕ್ಕೂ ಅವರು ಪದಾರ್ಪಣೆ ಮಾಡಿದ್ದರು. ಅಲ್ಲದೇ ದೆಹಲಿ ರಣಜಿ ತಂಡದ ನಾಯಕನಾಗಿಯೂ ಅವರು ಆಯ್ಕೆಯಾದರು.

### ಅಮ್ಮನಿಗೊಂದು ಮನೆ ಕಟ್ಟಿಕೊಡುವೆ: ಮಿಲ್ಸ್

ಐಪಿಎಲ್ ಟೂರ್ನಿಯು ಆರಂಭವಾದಾಗಿನಿಂದ ಹಲವು ಉದಯೋನ್ಮುಖ ಆಟಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸಿಕೊಟ್ಟಿದೆ. ಅಲ್ಲದೇ ಕೈತುಂಬ ಹಣ ಗಳಿಸುವ ಅವಕಾಶವನ್ನೂ ಮಾಡಿಕೊಟ್ಟಿದೆ. ಕೆಳಮಧ್ಯಮ ಕುಟುಂಬದ ಪ್ರತಿಭೆಗಳಲ್ಲಿ ಕಂಗಳಲ್ಲಿ ಬಣ್ಣದ ಕನಸು ತುಂಬಿದೆ. ತವರಿನ

## ಮಹಿಳೆಯರಿಗೂ ಬೇಕು ಐಪಿಎಲ್



‘ಕಳೆದ 11 ವರ್ಷಗಳಿಂದ ಬಿಸಿಸಿಐ ಮಹಿಳಾ ಕ್ರಿಕೆಟ್‌ಗೆ ಮಾನ್ಯತೆ ನೀಡಿದೆ. ಐಪಿಎಲ್ ಮೊದಲ ಟೂರ್ನಿ ನಡೆದಾಗಿನಿಂದಲೂ ಮಹಿಳೆಯರಿಗೂ ಇಂತಹ ಲೀಗ್ ನಡೆಯಬೇಕು ಎಂಬ ಬೇಡಿಕೆ ಇದೆ. ಆದರೆ ಇದುವರೆಗೂ ಈಡೇರಿಲ್ಲ’

ಭಾರತ ವನಿತೆಯರ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಅವರ ನುಡಿಗಳಿವು.

‘ಇವತ್ತು ಮಹಿಳಾ ಕ್ರಿಕೆಟ್ ಅಪಾರವಾಗಿ ಬೆಳೆದಿದೆ. ಬಹಳಷ್ಟು ಯುವತಿಯರು ಇದರತ್ತ ಆಕರ್ಷಿತರಾಗುತ್ತಿದ್ದಾರೆ. ಭಾರತದ ಹರ್ಮನ್‌ಪ್ರೀತ್ ಕೌರ್ ಇತ್ತೀಚೆಗೆ ಬಿಗ್ ಬ್ಯಾಷ್ ಲೀಗ್‌ನಲ್ಲಿ ಉತ್ತಮವಾಗಿ ಆಡಿ ಬಂದಿದ್ದಾರೆ. ಟ್ವೆಂಟಿ–20 ಕ್ರಿಕೆಟ್‌ನಲ್ಲಿ ನಮ್ಮ ತಂಡದ ಸಾಧನೆ ಉತ್ತಮವಾಗಿದೆ. ಆದ್ದರಿಂದ ಮಹಿಳೆಯರಿಗೂ ಐಪಿಎಲ್ ಆರಂಭಿಸಬೇಕು’ ಎಂದು ಶಾಂತಾ ಒತ್ತಾಯಿಸುತ್ತಾರೆ.

ಪ್ರೋ ಕಬಡ್ಡಿ, ಪ್ರೋ ಬ್ಯಾಡ್ಮಿಂಟನ್ ಲೀಗ್, ಐಟಿಪಿಎಲ್‌ಗಳಲ್ಲಿ ಮಹಿಳೆಯರಿಗೆ ಅವಕಾಶ ಇರುವುದನ್ನು ಉಲ್ಲೇಖಿಸುವ ಅವರು, ‘ಭಾರತದಲ್ಲಿ ಕ್ರಿಕೆಟ್‌ಗೆ ಅಪಾರವಾದ ಕ್ರೇಜ್ ಇದೆ. ಬಿಸಿಸಿಐ ಬಹಳ ಶ್ರೀಮಂತ ಸಂಸ್ಥೆ. ಪ್ರಾಯೋಜಕರನ್ನು ನಿಯಂತ್ರಿಸುವ ಶಕ್ತಿ ಇದೆ. ಇದರ ಲಾಭ ಪಡೆದು ಮಹಿಳಾ ಐಪಿಎಲ್ ಮಾಡುವುದು ಕಷ್ಟದ ಕೆಲಸವಲ್ಲ. ಆ ಮೂಲಕ ವನಿತೆಯರ ಕ್ರಿಕೆಟ್ ಬೆಳವಣಿಗೆ ವೇದಿಕೆ ಒದಗಿಸಿದಂತಾಗುತ್ತದೆ. ಆಟಗಾರ್ತಿಯರಿಗೆ ಆರ್ಥಿಕ ಅನುಕೂಲವೂ ಸಿಗುತ್ತದೆ. ಈ ನಿಟ್ಟಿನಲ್ಲಿ ಬಿಸಿಸಿಐ ಹೆಜ್ಜೆ ಇಡಬೇಕು’ ಎಂದು ಶಾಂತಾ ಸಲಹೆ ನೀಡಿದ್ದಾರೆ.